ಆಜ್ಞೆಯನ್ನು ಮಾಡುತ್ತೀರಿ ? ಈ ಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನು ನೀಡಬೇಕಾಗಿ ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ನನ್ನ ನೋಟೀಸ್ ಸಹ ಮೇಲ್ಕಂಡಂತೆ ಇದೆ. ಅದನ್ನು ಓದಿ ಹೇಳುತ್ತೇನೆ.—

ಸರ್ಕಾರವು ಕನಿಷ್ಠ ವೇತನ ಕಾಯಿದೆಯನ್ನು ಜಾರಿಗೆ ತಂದಿದ್ದರೂ ಸಹ, ಅನೇಕ ವರ್ಷಗಳಿಂದ ಗ್ರಾಮ ಪಂಚಾಯಿತಿಗಳಲ್ಲಿ ನೌಕರರಾಗಿ ಕೇವಲ 20.30.50 ರೂಪಾಯಿಗಳ ಮಾಸಿಕ ವೇತನದಿಂದ ಕೆಲಸ ಮಾಡುತ್ತಿದ್ದವರ ವೇತನವನ್ನು ಹೆಚ್ಚಿಸುವ ಬದಲು ಮೈಸೂರು ವಿಭಾಗಾಧಿಕಾರಿಗಳಪರು ತಮ್ಮ ಆದೇಶ ಸಂಖ್ಯೆ ವಿ.ಪಿ.ಸಿ. ಇ.ಸಿ.ಬಿ.ಶಿ, 85-86 ತಾರೀಖು 23-5-1985ರಂತೆ 1969ರ ನಂತರ ನೇಮಕಾತಿ ಹೊಂದಿದ ಎಲ್ಲ ನೌಕರರನ್ನು ಸೇವೆಯಿಂದ ವಿಮುಕ್ತಿಗೊಳಿಸಲು ಆಜ್ಞೆ ನೀಡಿದುದು ದುರ ದೃಷ್ಟಕರ. ಎಲ್ಲ ನೌಕರರಿಗೂ 1977, 1982ರ ವೇತನ ಶ್ರೇಣಿ ನೀಡುವ ಬದಲು ಕೇವಲ ಗೋಕರ್ಣ ಪಂಚಾಯಿತಿಗೆ ಮಾತ್ರ ಈ ಸೌಲಭ್ಯ ನೀಡಿದುದು ತೀರ ಅನ್ಯಾಯ. ಈ ತಾರತಮ್ಯದ ಕುರಿತು ಸೃಷ್ಟೀಕರಣ ನೀಡಬೇಕು. ಈಗ ಹೊರಡಿಸಿದ ವಿಭಾಗಾಧಿಕಾರಿಗಳ ಆಜ್ಞೆಯನ್ನು ಹಿಂತೆಗೆದುಕೊಂಡು ತೀರಾ ಕಷ್ಟದಲ್ಲಿರುವ ಬಹುತೇಕ ಹರಿಜನ ಗಿರಿಜನರೇ ಇರುವ ಈ ನೌಕರರಿಗೆ ನಿಯಮದಂತೆ ವೇತನ ನೀಡ ಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೆ, ಈ ಎರಡು ವಿಷಯಗಳಿಗೆ ಸಂಬಂಧಪಟ್ಟಂತೆ ನನ್ನ ಹತ್ತಿರ ಈಗ ಮಾಹಿತಿ ಇಲ್ಲ. ಮಾಹಿತಿ ಪಡೆದು ಸ್ಟೇಟ್‌ಮೆಂಟ್ ಮಾಡುತ್ತೇನೆ.

(10) ಬ್ರಹ್ಮಾವರನ ತೋಟದ ಪಡುಕೆರೆಯಲ್ಲಿ ಸಮುದ್ರ ಕೊರೆತ.

ಶ್ರೀ ಬಸವರಾಜ್ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ಬ್ರಹ್ಮಾವರ ಮತದಾರ ಕ್ಷೇತ್ರದ ತೋಟದ ಪಡುಕೆರೆಯಲ್ಲಿ ಸಮುದ್ರ ಕೊರೆತವು ಪ್ರಾರಂಭವಾಗಿದ್ದು ಈಗಾಗಲೇ ತೋಟಗಳು ಸಮುದ್ರದ ಪಾಲಾಗಿವೆ, ಹಾಗಾಗಿ ಈ ವಿಭಾಗದಲ್ಲಿ ಸಮುದ್ರಕ್ಕೆ ತಡೆಗೋಡೆಯನ್ನು ನಿರ್ಮಿಸಲು ತಕ್ಷಣ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು ಮತ್ತು ಅನಾಹುತಕ್ಕೆ ಈಡಾದವರಿಗೆ ಪರಿಹಾರವನ್ನು ಕೂಡಲೇ ಒದಗಿಸ ಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನಾ ಒತ್ತಾಯಿಸುತ್ತಿದ್ದೇನೆ.

ಶ್ರೀ ಪಿ. ಜೆ. ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ನನಗೆ ಇದರ ಬಗ್ಗೆ ತಿಳಿಸುವುದಕ್ಕೆ ಹೇಳಿದ್ದಾರೆ. ಏನೆಂದರೆ, ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಸರ್ಕಾರ ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತದೆಂದು ಈ ಸದನಕ್ಕೆ ತಿಳಿಸಬೇಕೆಂದು ನನಗೆ ಹೇಳಿದ್ದಾರೆ. ಆದರಂತೆ ನಾನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಇದನ್ನು ತಿಳಿಸುತ್ತಿದ್ದೇನೆ.

1-30 p.m.

(11) ರಾಜ್ಯದ ಕೆಲವು ಕಾಲೇಜುಗಳಲ್ಲಿ ಪಿ.ಯು.ಸಿ ಅಂಕಗಳ ಪಟ್ಟಿ ಒದಗಿಸದಿರುವುದು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ರಾಜ್ಯದ ಹಲವಾರು ಕಾಲೇಜುಗಳಲ್ಲಿ, ಜೂನಿಯರ್ ಕಾಲೇಜುಗಳಲ್ಲಿ ಪಿ.ಯು.ಸಿ. ಫಲಿತಾಂಶ ತಡೆಹಿಡಿಯಲಾಗಿದೆ. ಪಿ.ಯು.ಸಿ. ಬೋರ್ಡ್ ನವರು ಈ ಫಲಿತಾಂಶವನ್ನು ತಡೆಹಿಡಿದ ಕಾರಣ ಏನು.

ಅಧ್ಯಕ್ಷರು.—ನೀವು ನೋಟೀಸ್ ಕೊಟ್ಟ ಪ್ರಕಾರ ಓದಿ. ಬೇರೆ ಏನು ಒದಬಾರದು. ನಿಮ್ಮಲ್ಲಿ ಒಂದು ನೋಟೀಸ್ ಕಾಪಿ ಇರಬೇಕಲ್ಲ, ಇಲ್ಲದೇ ಹೋದರೆ ಅವರಿಗೆ ಒಂದು ನೋಟೀಸನ್ನು ಕೊಡಿ.

ಶ್ರೀ ಕೆ, ಪ್ರತಾಪಚಂದ್ರ ಶೆಟ್ಟಿ.—ಪಿ,ಯು,ಸಿ, ಬೋರ್ಡಿನ ಮಾರ್ಕ್ಸ್ ಕಾರ್ಡ್ ಬಾರದ ಕುರಿತು.

ರಾಜ್ಯದ ಹಲವಾರು ಜೂನಿಯರ್ ಕಾಲೇಜು ಮತ್ತು ಕಾಲೇಜುಗಳಿಗೆ ಪಿ.ಯು.ಸಿ. ಬೋರ್ಡ್ ನಿಂದ ಮಾರ್ಕ್ಸ್ ಕಾರ್ಡ್ ಮತ್ತು ಫಲಿತಾಂಶಗಳು ಬರದೇ ವಿದ್ಯಾರ್ಥಿನಿಯರಿಗೆ ತಮ್ಮ ಮುಂದಿನ ವ್ಯಾಸಂಗಕ್ಕೆ ಹೋಗಲು ಬಹಳಷ್ಟು ಕಷ್ಟಪಡುತ್ತಿರುವ ಕುರಿತು, ಬಹಳಷ್ಟು ಮನವಿಗಳು ಈಗಾಗಲೇ ಬಂದಿರುವುದರಿಂದ ಈ ವಿಚಾರವನ್ನು ಸರಕಾರದ ಗಮನಕ್ಕೆ ತರುತ್ತಿದ್ದೇನೆ. ಮತ್ತು.....

ಅಧ್ಯಕ್ಷರು.—ಮತ್ತು ಎಂಬುದು ಅಲ್ಲಿ ಇಲ್ಲ, ಸಾಕು ಕುಳಿತುಕೊಳ್ಳಿ. ಬಂಗಾರಪ್ಪನವರೇ ನೀವೆ ಅವರಿಗೆ ಸ್ವಲ್ಪ ಹೇಳಿ, ಇದು ಸರಿಯಲ್ಲ. ಪ್ರತಾಪಚಂದ್ರಶೆಟ್ಟಿಯವರೇ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ. ಪ್ರತಪಚಂದ್ರಶೆಟ್ಟಿ.—ಅಧ್ಯಕ್ಷರೇ.....

ಅಧ್ಯಕ್ಷರು.—ಬಂಗಾರಪ್ಪನವರೇ, ಸ್ವಲ್ಪ ದಯವಿಟ್ಟು ಅವರಿಗೆ ಹೇಳಿ. ನೀವು ಕುಳಿತುಕೊಳ್ಳಿ

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಪಿ.ಯು.ಸಿ. ಪರೀಕ್ಷೆಯಲ್ಲಿ ಪಾಸ್ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮಾರ್ಕ್ಸ್ ಕಾರ್ಡ್‌ಗಳನ್ನು ಈಗಾಗಲೇ ಕಳುಹಿಸಿಕೊಡಲಾಗಿದೆ. ಆದ್ದರಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯವರಿಗೆ ಮುಂದಿನ ವ್ಯಾಸಂಗಕ್ಕೆ ಯಾವುದೇ ರೀತಿಯ ತೊಂದರೆಯೂ ಆಗಿಲ್ಲ. ಅನಿವಾರ್ಯವಾಗಿ 82 ಅಭ್ಯರ್ಥಿಗಳ ಫಲಿತಾಂಶವನ್ನು ಮಾತ್ರ ತಡೆಯಲಾಗಿದೆ. ಆಯಾ ಸಂಬಂಧಿಸಿದ ಕಾಲೇಜುಗಳಿಂದ ಮಾಹಿತಿಗಳು ಬಂದ ನಂತರ ಫಲಿತಾಂಶವನ್ನು ಪ್ರಕಟಿಸಲಾಗುವುದು. ಅವರಲ್ಲಿ ಬಹಳಷ್ಟು ಜನ ವಿಜ್ಞಾನ ವಿದ್ಯಾರ್ಥಿಗಳಲ್ಲ. ಅವರಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳೇ ಇದ್ದಾರೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಅಧ್ಯಕ್ಷರೆ, ವಿತ್‌ಹೆಲ್ಡ್ ಏಕೆ ಮಾಡಿದ್ದು ?

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

(12) ತಾಂತ್ರಿಕ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಪಿ.ಯು.ಸಿ. ಫಲಿತಾಂಶ ತಡೆ ಹಿಡಿದಿರುವುದರಿಂದ ಆಗಿರುವ ತೊಂದರೆ.

ಶ್ರೀ ಜೆ. ಎಸ್. ಆಚಾರ್,—ಮಾನ್ಯ ಅಧ್ಯಕ್ಷರೆ, ಪಿ.ಯು.ಸಿ. ಪರೀಕ್ಷೆಯ ತಡೆಹಿಡಿದ ಫಲಿತಾಂಶ ಅಂಕ ಪಟ್ಟಿಯ ದೋಷ ಇವುಗಳ ಪುನರ್ ಪರಿಶೀಲನೆ ಆಗಿ ಇತ್ತೀಚೆಗೆ ನೂರಾರು ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ ಬದಲಾಗಿ ಘೋಷಿತವಾಗಿದೆ ಹಾಗೂ ಆಗುತ್ತದೆ. ಇದರಿಂದಾಗಿ ಎಂಟ್ರೆನ್ಸ್ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳಿಗೆ ಪರಿಷ್ಕೃತ ಫಲಿತಾಂಶದ ಲಾಭ ಸಿಗದೆ ತಾಂತ್ರಿಕ ಶಿಕ್ಷಣ ವಕ್ತರಿಗೆ ಅನ್ಯಾಯವಾಗುತ್ತಲಿದೆ. ಇದನ್ನು ಪರಿಹರಿಸಲು ಸರಕಾರ ಯಾವ ಕ್ರಮ ಕೈಗೊಂಡಿದೆ ಎಂಬುದನ್ನು ತಿಳಿಯ ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಪಿ.ಯು.ಸಿ. ಪರೀಕ್ಷೆಯಲ್ಲಿ ಕುಳಿತಿದ್ದವರಲ್ಲಿ 3,194 ಅಭ್ಯರ್ಥಿಗಳ ಫಲಿತಾಂಶವನ್ನು ಅನಿವಾರ್ಯವಾಗಿ ತಡೆಹಿಡಿಯಲಾಗಿತ್ತು. ಈಗಾಗಲೇ ಅವುಗಳ ಪೈಕಿ 3,112 ಅಭ್ಯರ್ಥಿಗಳ ಫಲಿತಾಂಶವನ್ನು ಪ್ರಕಟಿಸಿ ಮಾರ್ಕ್ಸ್ ಕಾರ್ಡ್‌ಗಳನ್ನು ಕಳುಹಿಸಿಕೊಡಲಾಗಿದೆ. ತಾಂತ್ರಿಕ ನಿರ್ದೇಶಕರು ಗಣಕ ಯಂತ್ರದ ಮಾಹಿತಿಯನ್ನು ಪಡೆದಿರುವವರು. ಈಗ ಕೇವಲ 82 ವಿದ್ಯಾರ್ಥಿಗಳ ಫಲಿತಾಂಶವನ್ನು ಮಾತ್ರ ತಡೆಹಿಡಿಯಲಾಗಿದೆ. ಅವರಲ್ಲಿ ಬಹಳಷ್ಟು ಜನ ಅನುತೀರ್ಣರಾಗಿರುವರೇ ಆಗಿದ್ದಾರೆ. ಇವರಲ್ಲಿ ವಿಜ್ಞಾನ ವಿಷಯದವರು ಯಾರೂ ಇಲ್ಲ. ಸಂಬಂಧಿಸಿದ ಕಾಲೇಜಿನ ಪ್ರಾಚಾರ್ಯರಿಂದ ಮಾಹಿತಿಯನ್ನು ತರಿಸಿಕೊಂಡು ಅವರ ಫಲಿತಾಂಶವನ್ನೂ ಪ್ರಕಟಿಸುತ್ತೇವೆ.

(13) ಕೋಲಾರದಲ್ಲಿ ಶೈತ್ಯಾಗಾರವನ್ನು ಸ್ಥಾಪಿಸದಿರುವ ಬಗ್ಗೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆಯಲ್ಲಿನ ಹೈನುಗಾರಿಕೆ ಯೋಜನೆಯು ಕೋಲಾರದಲ್ಲಿ ಶೈತ್ಯಾಗಾರವನ್ನು ಸ್ಥಾಪನೆ ಮಾಡದೆ ಇರುವುದರಿಂದ ಸ್ಥಗಿತಗೊಂಡಿದೆ. ಹೋದ ಸದನದಲ್ಲಿ ಕೂಡ ಈ ವಿಷಯ ತಂದಾಗ ತುರ್ತಾಗಿ ಸ್ಥಾಪಿಸಲು ಒಪ್ಪಿದ್ದರೂ ಇಲ್ಲಿಯವರೆಗೆ ಸ್ಥಾಪನೆ ಮಾಡದಿರುವುದರಿಂದ ಉಂಟಾಗಿರುವ ತೊಂದರೆಯನ್ನು, ಸದನದ ಗಮನಕ್ಕೆ ತರಲು ಅತಿ ಮಹತ್ವದ ಜರೂರು ಸಮಸ್ಯೆಯಾದ್ದರಿಂದ ಸದನದಲ್ಲಿ ತರಲು ಅನುಮತಿ ನೀಡಲು ಕೋರುತ್ತೇನೆ.

ಅಧ್ಯಕ್ಷರೆ, ಇದನ್ನು ಸ್ಥಾಪನೆ ಮಾಡದಿರುವುದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ, ಆದುದರಿಂದ ಯಾವಾಗ ಇದನ್ನು ಕೈಗೊಳ್ಳುತ್ತಾರೆ ಎಂಬುದನ್ನು ತಿಳಿಸಬೇಕು.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇಲ್ಲ. ಈ ವಿಷಯವನ್ನು ಅವರಿಗೆ ತಿಳಿಸುತ್ತೇನೆ, ಹಾಗೂ ಅವರಿಂದ ಉತ್ತರ ತರಿಸಿಕೊಡುತ್ತೇನೆ.

(14) ಮೈಸೂರಿನ ಉದ್ಯಾನಕಲಾ ಸಹಕಾರ ಸಂಘವನ್ನು ಡಿ-ರೆಕಗ್ನೈಸ್ ಮಾಡಿರುವ ಬಗ್ಗೆ.

ಶ್ರೀ ವೇದಾಂತ ಹೆಬ್ಬಾರ್.—ಮಾನ್ಯ ಅಧ್ಯಕ್ಷರೇ, ಮೈಸೂರು ಉದ್ಯಾನಕಲಾ ಸಹಕಾರ ಸಂಘ 1953ರಲ್ಲಿ ಆರಂಭವಾಗಿ ಕಳೆದ 32 ವರ್ಷಕ್ಕಿಂತ ಹೆಚ್ಚಾಗಿ ಮೈಸೂರು ನಗರದಲ್ಲಿ ತೋಟಗಾರಿಕೆ ಬೆಳವಣಿಗೆ ಬಗ್ಗೆ ಸಾರ್ವಜನಿಕರಲ್ಲಿ ಬಹಳ ಆಸಕ್ತಿಯನ್ನು ಉಂಟು ಮಾಡಿ ಮೆಚ್ಚುವಂತಹ ಕೆಲಸವನ್ನು ಮಾಡಿದೆ. ಇದುವರೆವಿಗೂ ಮೈಸೂರು ದಸರಾ ಮಹೋತ್ಸವ ಸಂದರ್ಭದಲ್ಲಿ ಫಲ ಪುಷ್ಪ ಪ್ರದರ್ಶನವನ್ನು ನಡೆಸಿ ಕರ್ನಾಟಕ ಜನತೆಯ ಮೆಚ್ಚುಗೆ ಪಡೆದಿದೆ. ಆದರೆ ಇತ್ತೀಚಿಗೆ ಈ ಸಂಸ್ಥೆಯನ್ನು ಹೊರಹಾಕಿ ಈ ಇಲಾಖೆಯ ಅಧಿಕಾರಿಗಳು ತಮ್ಮದೇ ಆದ ಉದ್ಯಾನ ಕಲಾ ಸಂಸ್ಥೆಯನ್ನು ಸ್ಥಾಪಿಸಿಕೊಳ್ಳಲು ಹೊರಟು ಈ ಹಳೆಯ ಸಂಸ್ಥೆಗೆ ಕೊಡಲಿ ಪ್ರಹಾರ ಮಾಡಲು ಹೊರಟಿದ್ದಾರೆ. ಸರ್ಕಾರಿ ಕೆಲಸದಲ್ಲಿ ಸಾರ್ವಜನಿಕರು ಜಾಗವಹಿಸುವ ಮೂಲ ಉದ್ದೇಶಕ್ಕೆ ತಿಲಾಂಜಲಿ ಇತ್ತಿದ್ದಾರೆ. ಮೈಸೂರು